ಓ.ಎಸ್.185/2021 ಡಿ.ಡಬ್ಲು-2
*ಬಸಲಿಂಗಪ್ಪ ತಂದೆ ಹನುಮಂತಪ್ಪ*

ದಿನಾಂಕ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು ಶ್ರೀ ಎ.ಎ.ಜಿ ವಕೀಲರಿಂದ :-**

ನಾನು ಪಿ.ಯು.ಸಿ ವರೆಗೆ ಓದಿರುತ್ತೇನೆ. ಹೊಲಗಳ ಖರೀದಿ ವ್ಯವಹಾರ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಾನು ಖರೀದಿ ಪತ್ರಕ್ಕೆ ಸಹಿ ಮಾಡುವಾಗ ಓದಿ ತಿಳಿದು ಸಹಿ ಮಾಡುತ್ತೇನೆ ಎಂದರೆ ಸರಿ. ಈ ಕೇಸನ್ನು ನಮ್ಮ ಸೊಸೆ ಮಲ್ಲಮ್ಮಳು ತನ್ನ ಗಂಡನ ವಿರುದ್ಧ ಹಾಕಿರುತ್ತಾಳೆ. ತನ್ನ ಮತ್ತು ಗಂಡನ ನಡುವೆ ವೈಮನಸ್ಸು ಬಂದಿದ್ದರಿಂದ ಈ ಕೇಸು ಹಾಕಿರುತ್ತಾಳೆ. ನಮಗೆ ಸಾಕ್ಷಿ ಹೇಳಲು ಮಲ್ಲಮ್ಮ ಕರೆದಿರುತ್ತಾಳೆ. ಮಲ್ಲಮ್ಮ ಈ ದಾವೆಯಲ್ಲಿ ವಾದಿ ಅಥವಾ ಪ್ರತಿವಾದಿ ಇದ್ದಾಳೋ ಎಂದು ನನಗೆ ಗೊತ್ತಿಲ್ಲ. ಓ.ಎಸ್.ನಂ.40/1998 ರ ದಾವೆ ಬಗ್ಗೆ ಮಾಹಿತಿ ಇಲ್ಲ. ಅಂತಿಮ ಡಿಕ್ರಿ ಪ್ರಕ್ರಿಯೇ ಬಗ್ಗೆ ಮಾಹಿತಿ ಗೊತ್ತಿಲ್ಲ. ಅಂತಿಮ ಡಿಕ್ರಿ 13/2025 ಬಗ್ಗೆ ನನಗೆ ಮಾಹಿತಿ ಇಲ್ಲ. ಸಾಕ್ಷಿ ಮುಂದುವರೆದು ಗಂಡನ ವಿರುದ್ಧ ಹಾಕಿದ್ದಾಳೆ ಎನ್ನುವ ವಿಷಯ ಮಾತ್ರ ಗೊತ್ತು. ಪ್ರತಿವಾದಿ 1 ರಿಂದ 6 ಯಾರು ಎಂದು ನನಗೆ ಗೊತ್ತಿಲ್ಲ. ಹನುಮಪ್ಪ ತಂದೆ ಶಿವಶಂಕ್ರಪ್ಪ ನಮ್ಮ ತಮ್ಮ. ಆತನು 4 ಎಕರೆಯಂತೆ 2 ಜಮೀನನ್ನು ಮದನ್ ಮತ್ತು ರಮೇಶ ರವರಿಗೆ ಮಾರಾಟ ಮಾಡಿರುತ್ತಾರೆ. ರಮೇಶ ಖರೀದಿ ಮಾಡಿದ ಜಮೀನನ್ನು ರಮೇಶ ಮತ್ತು ವೆಂಕಟೇಶ ಇಬ್ಬರೂ ಹಂಚಿಕೊಂಡಿರುತ್ತಾರೆ ಎಂದರೆ ಸರಿ. ಈ ವಿಷಯ ಬಿಟ್ಟು ಬೇರೆ ನನಗೆ ಮಾಹಿತಿ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)
ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಲಿಂಗಸಗೂರು.